ಹೋರಾಟಗಾರನಿಗಿಂತ ಹೆಚ್ಚು ಉಪಯುಕ್ತ'. 'ನಾನು ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಕನ್ನಡದ ಕೆಲಸಕ್ಕಾಗಿ ಓಡಾಡುತ್ತಿದ್ದೇನೆ. ನೀನೂ ನನ್ನ ಜೊತೆ ಬಂದು ಮಾತನಾಡು' ಎನ್ನುವ ಬಿಎಂಶ್ರೀ ಅವರ ಆಹ್ವಾನಕ್ಕೆ, 'ನಾನು ಕನ್ನಡದ ಕೆಲಸವನ್ನು ನನ್ನದೇ ರೀತಿಯಲ್ಲಿ ಮಾಡುತ್ತಿದ್ದೇನೆ. ನನ್ನ ದಾರಿ ನನಗೆ' ಎಂದು ಕುವೆಂಪು ಹೇಳಿದರಂತೆ'' ಎಂದು ಎಚ್ಎಸ್ಆರ್ ನೆನಪಿಸಿಕೊಂಡರು.

''ಅಡಿಗರೂ ಇದೇ ಮಾತು. ಕನ್ನಡದಲ್ಲಿ ಅತ್ಯುತ್ತಮವಾದ ಕಾವ್ಯ ರಚಿಸುವುದು ಕನ್ನಡದ ನಿಜವಾದ ಕೆಲಸ ಎಂದವರು ನಂಬಿದ್ದರು'' ಎಂದರು ದಿವಾಕರ್.

ಓದಿಗೆ ಬೇಕಾದ ವಿನಯ ಮತ್ತು ವಿವೇಕದ ಕುರಿತು ದಿವಾಕರ್ ಮಾತು ಮುಂದುವರಿಸಿದರು. ''ಮೊದಲು ನಾವು ಸಾಹಿತ್ಯ ಓದುತ್ತಿದ್ದಾಗ ಒಂದು ವಿನಯ ಇರುತ್ತಿತ್ತು. ಈಗ ನನಗೆ ಅರ್ಥವಾಗದೆ ಹೋದರೆ ಅದು ನಿಕೃಷ್ಟ, ನನಗೆ ಅರ್ಥವಾಗದೆ ಹೋದರೆ ಅದು ಸಾಹಿತ್ಯವಲ್ಲ ಎನ್ನುವ ಧೋರಣೆ ಬೆಳೆಯುತ್ತಿದೆ. ದೇವನೂರ ಮಹದೇವರ 'ಕುಸುಮಬಾಲೆ' ಬಗ್ಗೆ ಬಂದ ವಿಮರ್ಶೆ ಕೂಡ ಇದೇ ಬಗೆಯದು. ಕೆಲವರು ಅದನ್ನು ಓದಲಿಕ್ಕೆ ಆಗಲ್ಲ ಎಂದರು. ನಾನು ಓದಲಿಕ್ಕೆ ಸಿದ್ಧವಿಲ್ಲ ಎಂದರೆ ಅದು ನನ್ನ ಸಮಸ್ಯೆ, ಕೃತಿಯದ್ದಲ್ಲ. ನವ್ಯವನ್ನು ಹೀಗಳೆಯುವ ಬಹುತೇಕರು ಅದನ್ನು ಓದಿಯೇ ಇಲ್ಲ. ನವ್ಯವನ್ನು ವಿರೋಧಿಸುವ ಕೆಲವರು – ಆತ್ಮರತಿ, ಜನವಿರೋಧಿ, ಅನಾಥಪ್ರಜ್ಞೆ ಹೀಗೆ ಪಟ್ಟಿ ಮಾಡುತ್ತಾರೆ. ಆತ್ಮರತಿ ಎಷ್ಟು ಜನರಲ್ಲಿತ್ತು? ಅನಾಥಪ್ರಜ್ಞೆ ಎನ್ನುವುದೇನಾದರೂ ಇದ್ದರೆ ಅದು ಈ ಕಾಲಕ್ಕೆ ಹೆಚ್ಚು ಪ್ರಸ್ತುತ'' ಎಂದರು ದಿವಾಕರ್.



ದಿವಾಕರ್ ಅವರ ಆತಂಕಕ್ಕೆ ಪೂರಕವಾಗಿ ಮಾತನಾಡಿದ ಎಚ್ಎಸ್ಆರ್, ಓದುಗರ ಗುಂಪುಗಳು ದ್ವೀಪವಾಗಿ ಉಳಿಯುತ್ತಿರುವ ಅಪಾಯವನ್ನು ಪ್ರಸ್ತಾಪಿಸಿದರು. ''ಓದುಗರ ಸಮುದಾಯಗಳು ಈಗ ಸೃಷ್ಟಿಯಾಗುತ್ತಿವೆ. ಒಂದು ಸಮುದಾಯ ಇನ್ನೊಂದು ಸಮುದಾಯದ ಸಾಹಿತ್ಯವನ್ನು ತನಗೆ ಮುಖ್ಯವಲ್ಲ ಎಂದು ಭಾವಿಸುತ್ತಿದೆ. ಅರ್ಥದ ಪ್ರಶ್ನೆ ಅಲ್ಲ. ದಲಿತರ ಬಗ್ಗೆ ಬರೆದದ್ದು ಅವರಿಗಷ್ಟೇ ಮುಖ್ಯವಾದುದಾದರೆ, ಹೆಣ್ಣುಮಕ್ಕಳ ಬಗ್ಗೆ ಬರೆದದ್ದು ಅವರಿಗೆ ರೆಲವೆಂಟ್ ಎನ್ನುವುದಾದರೆ, ನಾವು ಗುಂಪುಗಳನ್ನು ಸೃಷ್ಟಿಸುತ್ತಿದ್ದೇವೆಯೇ ಹೊರತು ಸಾಹಿತ್ಯದ ಓದುಗರನ್ನಲ್ಲ. ಮೊದಲೂ ಹೀಗೆಯೇ ಇತ್ತು. ಮಂಟೇಸ್ವಾಮಿ ಹಾಗೂ ಮಲೆಮಹದೇಶ್ವರ ಕಾವ್ಯಗಳನ್ನು ಕೇರಿಗಳಲ್ಲಿ ಓದುತ್ತಿದ್ದರೆ, ಕುಮಾರವ್ಯಾಸ ಭಾರತವನ್ನು ದೇವಸ್ಥಾನಗಳಲ್ಲಿ ಮತ್ತು ವಚನಗಳನ್ನು ಮಠಗಳಲ್ಲಿ ಓದಲಾಗುತ್ತಿತ್ತು. ನವೋದಯ ಸನ್ನಿವೇಶದಲ್ಲಿ ಗುಂಪುಗಳನ್ನು ಮೀರಿ ಎಲ್ಲರೂ ಎಲ್ಲವನ್ನೂ ಓದುವ ಮನೋಧರ್ಮ ಬಂತು. ಮತ್ತೆ ಎಲ್ಲರೂ ಎಲ್ಲವನ್ನೂ ಓದಬೇಕಿಲ್ಲ